ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಬುಧವಾರ, ೧೫, ಜುಲೈ, ೨೦೨೬ (ಆಷಾಢ, ೨೪, ಶಕವರ್ಷ, ೧೯೪೮)	ಸಂಚಿಕೆ ೧೩೭
Volume - 161	BENGALURU, WEDNESDAY, 15, JULY, 2026 (ASHADHA, 24, SHAKAVARSHA, 1948)	Issue 137

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿಯ 18 **ಗ್ರಾಮಗಳಿಗೆ ಸಂಬಂಧಿಸಿದ ಸರ್ಕಾರಿ ಗೋಮಾಳದ ವಿವಿಧ ಸರ್ವೆ ನಂಬರುಗಳಲ್ಲಿ ಮಂಜೂರಿಯಾದ ಜಮೀನುಗಳಿಗೆ ದುರಸ್ತಿಯಾದ ಸರ್ವೆ ನಂಬರುಗಳ ವಿವಿಧ ಸರ್ವೆ ದಾಖಲೆಗಳ ಶಿಥಿಲವಾಗಿರುವ/ನಶಿಸಿ ಹೋಗಿರುವ** ಬಗ್ಗೆ ಪರಿಶೀಲಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ದಿನಾಂಕ:25.05.2026ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ

*****

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:25.05.2026ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ:

a. ಹೊಸದಾಗಿ ದುರಸ್ತಿಯಾದ ಹೊಸ ಸರ್ವೆ ನಂಬರುಗಳಲ್ಲಿ ಲಭ್ಯವಿಲ್ಲದ ಸ.ನಂ ಗಳ ಮಾಹಿತಿಯನ್ನು ಗ್ರಾಮವಾರು/ ಸರ್ವೆ ನಂಬರುವಾರು ಪಟ್ಟಿ ತಯಾರಿಸುವುದು.
b. ಲಭ್ಯವಿಲ್ಲದ ದಾಖಲೆಗಳನ್ನು ಮರು ನಿರ್ಮಾಣ ಮಾಡಲು ಕೈಗೊಳ್ಳಬಹುದಾದ ಅಭಿಪ್ರಾಯಗಳ ಕುರಿತು ವರದಿ ಸಲ್ಲಿಸುವುದು.
c. ಲಭ್ಯವಿಲ್ಲದ ಸ.ನಂ ಗಳ ಮಂಜೂರಿ ದಾಖಲೆಗಳು ಹಾಗೂ ಕಂದಾಯ ದಾಖಲೆಗಳನ್ನು ಪರಿಶೀಲಿಸಿ ಗ್ರಾಮವಾರು/ ಸರ್ವೆ ನಂಬರುವಾರು ಪಟ್ಟಿ ತಯಾರಿಸುವುದು.
d. ಭೂಮಾಪನ ಶಾಖೆಯಲ್ಲಿ ಲಭ್ಯವಿರುವ ದಾಖಲೆಗಳಾದ ಟಿಪ್ಪಣಿ, ಪಕ್ಕಾ ದಾಖಲೆಗಳಲ್ಲಿನ ಕರ್ದಾ ಮಾಹಿತಿಗೂ ತಹಶೀಲ್ದಾರರ ಕಛೇರಿಯ ಕಂದಾಯಗಳಾದ ಐ.ಎಲ್ ಮತ್ತು ಆರ್.ಆರ್ ದಾಖಲೆಗಳಲ್ಲಿನ ಕರ್ದಾ ಮಾಹಿತಿಯ ವಿವರಕ್ಕೆ ತಾಳೆಯಾಗುತ್ತಿದ್ದರೆ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಗೈರು ವಿಲೆ

ಕಡತಗಳ ಪುನರ್ ನಿರ್ಮಾಣ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಆಕಾರ್ ಬಂದ್ ಪುನರ್ ನಿರ್ಮಾಣ ಮಾಡಿಕೊಳ್ಳುವ ಬಗ್ಗೆ ನಿಯಮಾನುಸಾರ ಕ್ರಮವಹಿಸುವುದು.

e. ಭೂಮಾಪನ ಶಾಖೆಯಲ್ಲಿ ಲಭ್ಯವಿರುವ ದಾಖಲೆಗಳಾದ ಆಕಾರ್ ಬಂದ್ ಲಭ್ಯವಿದ್ದು, ತಹಶೀಲ್ದಾರರ ಕಛೇರಿಯ ಕಂದಾಯಗಳಾದ ಐ.ಎಲ್ ಮತ್ತು ಆರ್.ಆರ್ ದಾಖಲೆಗಳಲ್ಲಿನ ವಿಸ್ತೀರ್ಣವು ಆಕಾರ್ ಬಂದ್ ವಿಸ್ತೀರ್ಣಕ್ಕೆ ತಾಳೆಯಾಗುತ್ತಿದ್ದರೆ, ಸಂಬಂಧಪಟ್ಟ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಗೈರು ವಿಲೆ ಕಡತಗಳ ಪುನರ್ ನಿರ್ಮಾಣ ಸಮಿತಿ ಸಭೆಯಲ್ಲಿ ಮಂಡಿಸಿ ತೀರ್ಮಾನಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಿ ಸರ್ಕಾರದಿಂದ ಅನುಮೋದನೆ ಪಡೆದು ನಂತರ ಟಿಪ್ಪಣಿ, ಪಕ್ಕಾ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿಕೊಳ್ಳು ಬಗ್ಗೆ ನಿಯಮಾನುಸಾರ ಕ್ರಮವಹಿಸುವುದು.

f. ಭೂಮಾಪನ ಶಾಖೆಯಲ್ಲಿ ದಾಖಲೆಗಳು ಹಾಗೂ ತಹಶೀಲ್ದಾರರ ಕಛೇರಿಯ ಕಂದಾಯ ದಾಖಲೆಗಳು ಎರಡೂ ಕಛೇರಿಯಲ್ಲಿ ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ ಪಟ್ಟಿ ತಯಾರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿ ಸರ್ಕಾರದಿಂದ ಅನುಮೋದನೆ ಪಡೆದು ಸರ್ಕಾರದಿಂದ ಸೂಕ್ತ ಆದೇಶ ಪಡೆದು ಪುನರ್ ನಿರ್ಮಾಣ ಮಾಡಿಕೊಳ್ಳುವ ಬಗ್ಗೆ ನಿಯಮಾನುಸಾರ ಕ್ರಮವಹಿಸುವುದು.

g. ಯಾವುದೇ ನಕಲಿ ದಾಖಲೆ, ಸೇರ್ಪಡೆ ಮಾಡಿದ ದಾಖಲೆಗಳು ತಿದ್ದಿದ ದಾಖಲೆಗಳು ಕಂಡುಬಂದಲ್ಲಿ ಕಡ್ಡಾಯವಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ವರದಿ ಪಡೆಯುವುದು.

h. ಸದರಿ ಕಾರ್ಯದಲ್ಲಿ ಯಾವುದೇ ನಕಲಿ ದಾಖಲೆಗಳು ಸೇರ್ಪಡೆಯಾಗದಂತೆ ಹಾಗೂ ಯಾವುದೇ ದಾಖಲೆಗಳನ್ನು ಸೃಷ್ಟಿಸದಂತೆ ನಿಗಾವಹಿಸುವುದು.

ಅದರಂತೆ, ಜಾಲ ಹೋಬಳಿಯು ಈ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿದ್ದು, ದಾಖಲೆಗಳ ನಿರ್ವಹಣೆಯು ಹೊಸದಾಗಿ ರಚನೆಯಾದ ಯಲಹಂಕ ತಾಲ್ಲೂಕಿಗೆ ಸೇರ್ಪಡೆಯಾಗಿರುತ್ತದೆ. ಈ ಪೈಕಿ 18 ಗ್ರಾಮಗಳ ವಿವಿಧ ಸರ್ಕಾರಿ ನಂಬರುಗಳಲ್ಲಿ ಮಂಜೂರಿಯಾದ ಜಮೀನುಗಳಿಗೆ ಪೋಡಿಯಾದ ಸರ್ವೆ ದಾಖಲೆಗಳು/ಪೋಡಿ ದಾಖಲೆಗಳು ನಶಿಸಿ ಹೋಗಿರುವುದು/ಕಾಣೆಯಾಗಿರುವುದು ಕಂಡುಬಂದಿರುತ್ತದೆ.

ಇಂತಹ ಕಾಣೆಯಾದ/ನಶಿಸಿ ಹೋಗಿರುವ ದಾಖಲೆಗಳನ್ನು ಪುನರ್ ನಿರ್ಮಾಣ ಕುರಿತಂತೆ 2009 ರಲ್ಲಿ ಆದೇಶವಾಗಿದ್ದರೂ 2009 ರಿಂದ ಇದುವರೆವಿಗೂ ನಿರೀಕ್ಷಿತ ಪ್ರಮಾಣದಲ್ಲಿ ದಾಖಲೆಗಳ ಪುನರ್ ನಿರ್ಮಾಣವಾಗಿರುವುದಿಲ್ಲ. ಇದರಿಂದ ಸಂಬಂಧಿಸಿದ ಹಿಡುವಳಿದಾರರಿಗೆ, ಖಾತೆದಾರರುಗಳಿಗೆ ತುಂಬಾ ಅನಾನುಕೂಲವಾಗಿ ದೈನಂದಿನ ಕಾರ್ಯದಲ್ಲಿ ತೊಂದರೆಯಾಗಿರುತ್ತದೆ. ಅಲ್ಲದೇ ಕಛೇರಿಯಲ್ಲಿ ದಾಖಲೆಗಳ ಸಮರ್ಪಕ ನಿರ್ವಹಣೆಯು ಕಷ್ಟಸಾಧ್ಯವಿರುತ್ತದೆ ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ನಿಗಧಿತ ಅವದಿಯೊಳಗೆ ಮೋಜಿಣಿ ಕಾರ್ಯ ನಡೆಸಿ ದಾಖಲೆಗಳನ್ನು ಸಲ್ಲಿಸುವಲ್ಲಿ ವಿಳಂಬವಾಗುತ್ತಿದ್ದು, ಅನೇಕ ಸಲ ಘನ ನ್ಯಾಯಾಲಯಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವುದರ ಕುರಿತಂತೆ ಹಾಗೂ ಹಾಗೂ ಖರಾಬು ವಿಸ್ತೀರ್ಣವನ್ನು ಮಂಜೂರಿಯಾಗಿರುವ ವಿಸ್ತೀರ್ಣದಲ್ಲಿ ಕಳೆದು ಪೋಡಿ ದುರಸ್ತಿ ಮಾಡದೆ, ಮಂಜೂರಿ ವಿಸ್ತೀರ್ಣದ ಜೊತೆ ಖರಾಬು ವಿಸ್ತೀರ್ಣವನ್ನು ಸೇರಿಸಿ ಪೋಡಿ ದುರಸ್ತಿ ಮಾಡಿರುವುದು ಕಂಡು ಬಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಖರಾಬು ಸೇರಿ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿಕೊಳ್ಳುವುದರ ಕುರಿತಂತೆ ಪರಿಶೀಲಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ತೀರ್ಮಾನಿಸಿ ಅದರಂತೆ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ. E-Comp. No.:1866577 File No.:RD-LGB/182/2025
ಬೆಂಗಳೂರು ದಿನಾಂಕ: 06.06.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಜಾಲ ಹೋಬಳಿಯು ಈ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿದ್ದು, ದಾಖಲೆಗಳ ನಿರ್ವಹಣೆಯು ಹೊಸದಾಗಿ ರಚನೆಯಾದ ಯಲಹಂಕ ತಾಲ್ಲೂಕಿಗೆ ಸೇರ್ಪಡೆಯಾಗಿರುತ್ತದೆ. ಈ ಪೈಕಿ 18 ಗ್ರಾಮಗಳ ವಿವಿಧ ಸರ್ಕಾರಿ ನಂಬರುಗಳಲ್ಲಿ ಮಂಜೂರಿಯಾದ ಜಮೀನುಗಳಿಗೆ ಪೋಡಿಯಾದ ಸರ್ವೆ ದಾಖಲೆಗಳು/ಪೋಡಿ ದಾಖಲೆಗಳು ನಶಿಸಿ ಹೋಗಿರುವುದು/ಕಾಣೆಯಾಗಿರುವುದು ಕಂಡುಬಂದಿರುತ್ತದೆ.

ಇಂತಹ ಕಾಣೆಯಾದ/ನಶಿಸಿ ಹೋಗಿರುವ ದಾಖಲೆಗಳನ್ನು ಪುನರ್ ನಿರ್ಮಾಣ ಕುರಿತಂತೆ 2009 ರಲ್ಲಿ ಆದೇಶವಾಗಿದ್ದರೂ 2009 ರಿಂದ ಇದುವರೆವಿಗೂ ನಿರೀಕ್ಷಿತ ಪ್ರಮಾಣದಲ್ಲಿ ದಾಖಲೆಗಳ ಪುನರ್ ನಿರ್ಮಾಣವಾಗಿರುವುದಿಲ್ಲ. ಇದರಿಂದ ಸಂಬಂಧಿಸಿದ ಹಿಡುವಳಿದಾರರಿಗೆ, ಖಾತೆದಾರರುಗಳಿಗೆ ತುಂಬಾ ಅನಾನುಕೂಲವಾಗಿ ದೈನಂದಿನ ಕಾರ್ಯದಲ್ಲಿ ತೊಂದರೆಯಾಗಿರುತ್ತದೆ. ಅಲ್ಲದೇ ಕಛೇರಿಯಲ್ಲಿ ದಾಖಲೆಗಳ ಸಮರ್ಪಕ ನಿರ್ವಹಣೆಯು ಕಷ್ಟಸಾಧ್ಯವಿರುತ್ತದೆ ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ನಿಗಧಿತ ಅವದಿಯೊಳಗೆ ಮೋಜಿಣಿ ಕಾರ್ಯ ನಡೆಸಿ ದಾಖಲೆಗಳನ್ನು ಸಲ್ಲಿಸುವಲ್ಲಿ ವಿಳಂಬವಾಗುತ್ತಿದ್ದು, ಅನೇಕ ಸಲ ಘನ ನ್ಯಾಯಾಲಯಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವುದರ ಕುರಿತಂತೆ ಹಾಗೂ ಖರಾಬು ವಿಸ್ತೀರ್ಣವನ್ನು ಮಂಜೂರಿಯಾಗಿರುವ ವಿಸ್ತೀರ್ಣದಲ್ಲಿ ಕಳೆದು ಪೋಡಿ ದುರಸ್ತಿ ಮಾಡದೆ, ಮಂಜೂರಿ ವಿಸ್ತೀರ್ಣದ ಜೊತೆ ಖರಾಬು ವಿಸ್ತೀರ್ಣವನ್ನು ಸೇರಿಸಿ ಪೋಡಿ ದುರಸ್ತಿ ಮಾಡಿರುವುದು ಕಂಡು ಬಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ ಪುನರ್ ನಿರ್ಮಾಣ ಮಾಡಿಕೊಳ್ಳುವುದರ ಕುರಿತಂತೆ ಪರಿಶೀಲಿಸಲು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ಈ ಕೆಳಕಂಡಂತೆ ಸಮಿತಿ ರಚಿಸಿ ಆದೇಶಿಸಿದೆ.

ಕ್ರಮ ಸಂಖ್ಯೆ	**ಅಧ್ಯಕ್ಷರು/ಸದಸ್ಯರ ಹೆಸರು**	**ಹುದ್ದೆ**
1	ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ	ಅಧ್ಯಕ್ಷರು
2	ಭೂ ದಾಖಲೆಗಳ ಉಪನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ	ಸದಸ್ಯರು
3	ಉಪವಿಭಾಗಾಧಿಕಾರಿ, ಬೆಂಗಳೂರು ಉತ್ತರ ಉಪವಿಭಾಗ	ಸದಸ್ಯರು
4	ತಹಶೀಲ್ದಾರ್, ಯಲಹಂಕ ತಾಲ್ಲೂಕು	ಸದಸ್ಯ ಕಾರ್ಯದರ್ಶಿ

ಕ್ರಮ ಸಂಖ್ಯೆ	**ಅಧ್ಯಕ್ಷರು/ಸದಸ್ಯರ ಹೆಸರು**	**ಹುದ್ದೆ**
1	ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ	ಅಧ್ಯಕ್ಷರು
2	ಭೂ ದಾಖಲೆಗಳ ಉಪನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ	ಸದಸ್ಯರು
3	ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ	ಸದಸ್ಯರು
4	ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು	ಸದಸ್ಯ ಕಾರ್ಯದರ್ಶಿ

1) ಯಾವುದೇ ನಕಲಿ ದಾಖಲೆ, ಸೇರ್ಪಡೆ ಮಾಡಿದ ದಾಖಲೆಗಳು,ತಿದ್ದಿದ ದಾಖಲೆಗಳು ಕಂಡುಬಂದಲ್ಲಿ ಕಡ್ಡಾಯವಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ವರದಿ ಪಡೆಯುವುದು.
2) ಸದರಿ ಕಾರ್ಯದಲ್ಲಿ ಯಾವುದೇ ನಕಲಿ/ತಿದ್ದಿದ ದಾಖಲೆಗಳು ಸೇರ್ಪಡೆಯಾಗದಂತೆ ಹಾಗೂ ಯಾವುದೇ ದಾಖಲೆಗಳನ್ನು ಸೃಷ್ಟಿಸದಂತೆ ನಿಗಾ ವಹಿಸುವುದು.

3) ಸದರಿ ಕಾರ್ಯವನ್ನು ಒಂದು ತಿಂಗಳೊಳಗಾಗಿ ಪೂರ್ಣಗೊಳಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹಾಂತಯ್ಯ ಎಸ್‌ಹೊಸಮಠ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

PR-232

ಕರ್ನಾಟಕ ಸರ್ಕಾರದ ನಡವಳಿಗಳು:

ವಿಷಯ:- ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿಯ 18 ಗ್ರಾಮಗಳು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ 12 ಗ್ರಾಮಗಳಿಗೆ ಸಂಬಂಧಿಸಿದ ಸರ್ಕಾರಿ ಗೋಮಾಳದ ವಿವಿಧ ಸರ್ವೆ ನಂಬರುಗಳಲ್ಲಿ ಮಂಜೂರಿಯಾದ ಜಮೀನುಗಳಿಗೆ ದುರಸ್ತಿಯಾದ ಸರ್ವೆ ನಂಬರುಗಳ ವಿವಿಧ ಸರ್ವೆ ದಾಖಲೆಗಳ ಶಿಥಿಲವಾಗಿರುವ/ನಶಿಸಿ ಹೋಗಿರುವ /ಕಾಣೆಯಾಗಿರುವ ಬಗ್ಗೆ ಪರಿಶೀಲಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: E-Comp. No.:1866577 File No: RD-LGB/182/2025 ಬೆಂಗಳೂರು ದಿನಾಂಕ: 06-06-2026.
2. ದಿನಾಂಕ: 29-01-2026 ರ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
3. ದಿನಾಂಕ:24-03-2026, 25-05-2026 ಮತ್ತು ದಿನಾಂಕ:09-06-2026 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ ಮತ್ತು ಸಭೆಯಲ್ಲಿ ನೀಡಿದ ನಿರ್ದೇಶನ.

* * * * *

ಪ್ರಸ್ತಾವನೆ:

ಜಾಲ ಹೋಬಳಿಯು ಈ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿದ್ದು, ಹೊಸದಾಗಿ ರಚನೆಯಾದ ಯಲಹಂಕ ತಾಲ್ಲೂಕಿಗೆ ಸೇರ್ಪಡೆಯಾಗಿರುತ್ತದೆ. ಈ ಪೈಕಿ 18 ಗ್ರಾಮಗಳ ವಿವಿಧ ಸರ್ಕಾರಿ ನಂಬರುಗಳಲ್ಲಿ ಮಂಜೂರಿಯಾದ ಜಮೀನುಗಳಿಗೆ ಪೋಡಿಯಾದ ಸರ್ವೆ ದಾಖಲೆಗಳು/ಪೋಡಿ ದಾಖಲೆಗಳು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ 12 ಗ್ರಾಮಗಳ ವಿವಿಧ ಸರ್ಕಾರಿ ನಂಬರುಗಳಲ್ಲಿ ಮಂಜೂರಿಯಾದ ಜಮೀನುಗಳಿಗೆ ಪೋಡಿಯಾದ ಸರ್ವೆ ದಾಖಲೆಗಳು/ಪೋಡಿ ದಾಖಲೆಗಳು ನಶಿಸಿ ಹೋಗಿರುವುದು/ಕಾಣೆಯಾಗಿರುವುದು ಕಂಡು ಬಂದಿರುವ ಹಿನ್ನಲೆಯಲ್ಲಿ ಲಭ್ಯವಿರುವ ವಿವಿಧ ಕಂದಾಯ ಮತ್ತು ಸರ್ವೆ ದಾಖಲೆಗಳನ್ನು ಪರಿಶೀಲಿಸಿಕೊಂಡು, ಹೊಸದಾಗಿ ದಾಖಲೆಗಳ ಪುನರ್

ನಿರ್ಮಾಣ ಮಾಡಿಕೊಳ್ಳುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಸರ್ಕಾರದ ಆದೇಶ ಸಂಖ್ಯೆ: E-Comp. No.:1866577 File Ni.: RD-LGB/182/2025 ದಿನಾಂಕ:06.06.2026 ಅನ್ನು ಹಿಂಪಡೆಯಲು ನಿರ್ಧರಿಸಿ ಸದರಿ ಸಮಿತಿಯನ್ನು ಪುನರ್ ರಚಿಸಿ, ಕ್ರಮ ಕೈಗೊಳ್ಳುವುದು ಸೂಕ್ತವೆಂದು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: E-Comp. No.:1866577 File No.: RD-LGB/182/2025
ಬೆಂಗಳೂರು ದಿನಾಂಕ: 23.06.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: E-Comp. No.:1866577 File No.: RD-LGB/182/2025 ಬೆಂಗಳೂರು ದಿನಾಂಕ: 06.06.2026 ಅನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಮುಂದುವರೆದು, ಜಾಲ ಹೋಬಳಿಯು ಈ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿದ್ದು, ಹೊಸದಾಗಿ ರಚನೆಯಾದ ಯಲಹಂಕ ತಾಲ್ಲೂಕಿಗೆ ಸೇರ್ಪಡೆಯಾಗಿರುತ್ತದೆ. ಈ ಪೈಕಿ 18 ಗ್ರಾಮಗಳ ವಿವಿಧ ಸರ್ಕಾರಿ ನಂಬರುಗಳಲ್ಲಿ ಮಂಜೂರಿಯಾದ ಜಮೀನುಗಳಿಗೆ ಪೋಡಿಯಾದ ಸರ್ವೆ ದಾಖಲೆಗಳು/ಪೋಡಿ ದಾಖಲೆಗಳು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ 12 ಗ್ರಾಮಗಳಿಗೆ ಸಂಬಂಧಿಸಿದ ಸರ್ಕಾರಿ ಗೋಮಾಳದ ವಿವಿಧ ಸರ್ವೆ ನಂಬರುಗಳಲ್ಲಿ ಮಂಜೂರಿಯಾದ ಜಮೀನುಗಳಿಗೆ ದುರಸ್ತಿಯಾದ ಸರ್ವೆ ನಂಬರುಗಳ ವಿವಿಧ ಸರ್ವೆ ದಾಖಲೆಗಳು ನಶಿಸಿ ಹೋಗಿರುವುದು/ಕಾಣೆಯಾಗಿರುವುದು ಕಂಡು ಬಂದಿರುತ್ತದೆ.

ಇಂತಹ ಕಾಣೆಯಾದ/ನಶಿಸಿ ಹೋಗಿರುವ ದಾಖಲೆಗಳನ್ನು ಪುನರ್ ನಿರ್ಮಾಣ ಕುರಿತಂತೆ 2009 ರಲ್ಲಿ ಆದೇಶವಾಗಿದ್ದರೂ 2009 ರಿಂದ ಇದುವರೆವಿಗೂ ನಿರೀಕ್ಷಿತ ಪ್ರಮಾಣದಲ್ಲಿ ದಾಖಲೆಗಳ ಪುನರ್ ನಿರ್ಮಾಣವಾಗಿರುವುದಿಲ್ಲ. ಇದರಿಂದ ಸಂಬಂಧಿಸಿದ ಹಿಡುವಳಿದಾರರಿಗೆ, ಖಾತೆದಾರರುಗಳಿಗೆ ತುಂಬಾ ಅನಾನುಕೂಲವಾಗಿ ದೈನಂದಿನ ಕಾರ್ಯದಲ್ಲಿ ತೊಂದರೆಯಾಗಿರುತ್ತದೆ. ಅಲ್ಲದೇ ಕಛೇರಿಯಲ್ಲಿ ದಾಖಲೆಗಳ ಸಮರ್ಪಕ ನಿರ್ವಹಣೆಯು ಸಮಸ್ಯೆಯಾಗಿರುತ್ತದೆ ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ನಿಗಧಿತ ಅವಧಿಯೊಳಗೆ ಮೋಜಿಣಿ ಕಾರ್ಯ ನಡೆಸಿ ದಾಖಲೆಗಳನ್ನು ಸಲ್ಲಿಸುವಲ್ಲಿ ವಿಳಂಬವಾಗುತ್ತಿದ್ದು, ವಿವಿಧ ಪ್ರಕಣಗಳಲ್ಲಿ ಮಾನ್ಯ ನ್ಯಾಯಾಲಯಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು ಹಾಗೂ ಖರಾಬು ವಿಸ್ತೀರ್ಣವನ್ನು ಮಂಜೂರಿಯಾಗಿರುವ ವಿಸ್ತೀರ್ಣದಲ್ಲಿ ಕಳೆದು ಪೋಡಿ ದುರಸ್ತಿ ಮಾಡದೆ, ಮಂಜೂರಿ ವಿಸ್ತೀರ್ಣದ ಜೊತೆ ಖರಾಬು ವಿಸ್ತೀರ್ಣವನ್ನು ಸೇರಿಸಿ ಪೋಡಿ ದುರಸ್ತಿ ಮಾಡಿರುವುದು ಕಂಡು ಬಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ ಪುನರ್ ನಿರ್ಮಾಣ ಮಾಡಿಕೊಳ್ಳುವುದರ ಕುರಿತು ಕ್ರಮವಹಿಸಲು ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಸಂಬಂಧಿಸಿದಂತೆ, ಪ್ರತ್ಯೇಕವಾಗಿ ಜಿಲ್ಲಾಧಿಕಾ , ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಸಮಿತಿ ರಚಿಸಿ ಆದೇಶಿಸಿದೆ.

ಕ್ರಮ ಸಂಖ್ಯೆ	ಅಧ್ಯಕ್ಷರು/ಸದಸ್ಯರ ಹೆಸರು	ಹುದ್ದೆ
1	ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ	ಅಧ್ಯಕ್ಷರು
2	ಭೂ ದಾಖಲೆಗಳ ಉಪನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ	ಸದಸ್ಯರು
3	ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ	ಸದಸ್ಯರು

4	ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ	ಸದಸ್ಯರು
5	ಭೂದಾಖಲೆಗಳ ಸಹಾಯಕ ನಿರ್ದೇಶಕರು, ಯಲಹಂಕ ತಾಲ್ಲೂಕು	ಸದಸ್ಯರು
6	ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು	ಸದಸ್ಯರು
7	ತಹಶೀಲ್ದಾರ್, ಯಲಹಂಕ ತಾಲ್ಲೂಕು	ಸದಸ್ಯ ಕಾರ್ಯದರ್ಶಿ

ಕ್ರಮ ಸಂಖ್ಯೆ	ಅಧ್ಯಕ್ಷರು/ಸದಸ್ಯರ ಹೆಸರು	ಹುದ್ದೆ
1	ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ	ಅಧ್ಯಕ್ಷರು
2	ಭೂ ದಾಖಲೆಗಳ ಉಪನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ	ಸದಸ್ಯರು
3	ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಉಪವಿಭಾಗ	ಸದಸ್ಯರು
4	ಭೂದಾಖಲೆಗಳ ಸಹಾಯಕ ನಿರ್ದೇಶಕರು, ದೇವನಹಳ್ಳಿ ತಾಲ್ಲೂಕು	ಸದಸ್ಯರು
5	ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು	ಸದಸ್ಯ ಕಾರ್ಯದರ್ಶಿ

ಸಮಿತಿಯ ಪರಿಶೀಲನಾಂಶಗಳು:-

a. ಹೊಸದಾಗಿ ದುರಸ್ತಿಯಾದ ಹೊಸ ಸರ್ವೆ ನಂಬರುಗಳಲ್ಲಿ ಲಭ್ಯವಿಲ್ಲದ ಸರ್ವೆನಂಬರ್ ಗಳ ಮಾಹಿತಿಯನ್ನು ಗ್ರಾಮವಾರು/ಸರ್ವೆ ನಂಬರುವಾರು ಪಟ್ಟಿ ತಯಾರಿಸುವುದು.
b. ಲಭ್ಯವಿಲ್ಲದ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಲು ಕೈಗೊಳ್ಳಬಹುದಾದ ಅಭಿಪ್ರಾಯಗಳ ಕುರಿತು ವರದಿ ಸಲ್ಲಿಸುವುದು.
c. ಲಭ್ಯವಿಲ್ಲದ ಸರ್ವೆನಂಬರ್‌ಗಳ ಮಂಜೂರಿ ದಾಖಲೆಗಳು ಹಾಗೂ ಕಂದಾಯ ದಾಖಲೆಗಳನ್ನು ಪರಿಶೀಲಿಸಿ ಗ್ರಾಮವಾರು/ಸರ್ವೆ ನಂಬರುವಾರು ಪಟ್ಟಿ ತಯಾರಿಸುವುದು.

d. ಭೂಮಾಪನ ಶಾಖೆಯಲ್ಲಿ ಆಕಾರ್‌ಬಂದ್ ಲಭ್ಯವಿದ್ದು, ತಹಶೀಲ್ದಾರರ ಕಛೇರಿಯಲ್ಲಿ ಲಭ್ಯವಿರುವ ಕಂದಾಯ ದಾಖಲೆಗಳಾದ ಐ.ಎಲ್ ಮತ್ತು ಆರ್.ಆರ್ ದಾಖಲೆಗಳಲ್ಲಿನ ವಿಸ್ತೀರ್ಣವು ಆಕಾರ್ ಬಂದ್ ವಿಸ್ತೀರ್ಣಕ್ಕೆ ತಾಳೆಯಾಗುತ್ತಿದ್ದರೆ, ಸಂಬಂಧಪಟ್ಟ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಗೈರುವಿಲೇ ಕಡತಗಳ ಪುನರ್ ನಿರ್ಮಾಣ ಸಮಿತಿ ಸಭೆಯಲ್ಲಿ ಮಂಡಿಸಿ, ಮಂಜೂರಿ ನೈಜತೆ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಂಡು, ನಂತರ ಸಮಿತಿ ಸಭೆಯ ನಡವಳಿಯಂತೆ ಟಿಪ್ಪಣಿ, ಪಕ್ಕಾ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿಕೊಳ್ಳುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ನಿಯಾಮಾನುಸಾರ ಕ್ರಮ ವಹಿಸುವುದು.

e. ಭೂಮಾಪನ ಶಾಖೆಯಲ್ಲಿ ಕೆ.ಡಿ.ಟಿ ದಾಖಲೆಗೆ ಮೇಲುಸಹಿಯಾಗಿ ಟಿಪ್ಪಣಿ, ಪಕ್ಕಾ ದಾಖಲೆಗಳು ಲಭ್ಯವಿದ್ದು ಆಕಾರ್‌ಬಂದ್ ಲಭ್ಯವಿಲ್ಲದಿದ್ದಲ್ಲಿ, ಕೆ.ಡಿ.ಟಿ ಆಧಾರದ ಮೇಲೆ ಆಕಾರಬಂದ್ ಪುನರ್ ನಿರ್ಮಾಣ ಮಾಡಿಕೊಂಡು, ಸಕ್ಷಮ ಪ್ರಾಧಿಕಾರವಾದ ಭೂದಾಖಲೆಗಳ ಉಪ ನಿರ್ದೇಶಕರ ಅನುಮೋದನೆಯನ್ನು ಪಡೆಯುವ ಕುರಿತು ನಿಯಾಮಾನುಸಾರ ಕ್ರಮವಹಿಸುವುದು.

f. ಭೂಮಾಪನ ಶಾಖೆಯಲ್ಲಿ ಟಿಪ್ಪಣಿ, ಪಕ್ಕಾ ದಾಖಲೆಗಳು ಇದ್ದು, ಆಕಾರಬಂದ್ ಮತ್ತು ಕೆ.ಡಿ.ಟಿ ಲಭ್ಯವಿಲ್ಲದಿದ್ದರೆ, ಲಭ್ಯವಿರುವ ದಾಖಲೆಗಳಾದ ಟಿಪ್ಪಣಿ, ಪಕ್ಕಾ ದಾಖಲೆಗಳಲ್ಲಿನ ಕರ್ದಾ ಮಾಹಿತಿಗೂ ತಹಶೀಲ್ದಾರರ ಕಛೇರಿಯ ಕಂದಾಯ ದಾಖಲೆಗಳಾದ ಐ.ಎಲ್ ಮತ್ತು ಆರ್.ಆರ್ ದಾಖಲೆಗಳಲ್ಲಿನ ಕರ್ದಾ ಮಾಹಿತಿಯ ವಿವರಕ್ಕೆ ತಾಳೆಯಾಗುತ್ತಿದ್ದರೆ, ಆಕಾರಬಂದ್ ಪುನರ್ ನಿರ್ಮಾಣ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಗೈರುವಿಲೇ ಕಡತಗಳ ಪುನರ್ ನಿರ್ಮಾಣ ಸಮಿತಿ ಸಭೆಯಲ್ಲಿ ಮಂಡಿಸಿ ಮಂಜೂರಿ ನೈಜತೆ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಂಡು, ನಂತರ ಸಮಿತಿ ಸಭೆಯ ನಡವಳಿಯಂತೆ ಆಕಾರ್‌ಬಂದ್ ಪುನರ್ ನಿರ್ಮಾಣ ಮಾಡಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ನಿಯಾಮಾನುಸಾರ ಕ್ರಮ ವಹಿಸುವುದು

g. ಮಂಜೂರಿ ದಾಖಲೆಗಳು ಲಭ್ಯವಿದ್ದು, ಭೂಮಾಪನ ಶಾಖೆಯಲ್ಲಿ ಆಕಾರಬಂದ್, ಕೆ.ಡಿ.ಟಿ, ಪಕ್ಕಾ ಟಿಪ್ಪಣಿ ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ, ಹೊಸ ಪೋಡಿ ಪ್ರಕರಣವೆಂದು ಪರಿಗಣಿಸಿ, ಸರ್ಕಾರದ ಆದೇಶ ಸಂಖ್ಯೆ: ಕಂ.ಇ.156.ಎಸ್.ಎಸ್.ಎಂ.2024, ಬೆಂಗಳೂರು ದಿನಾಂಕ: 25-11-2024 ರಂತೆ ನಿಯಮಾನುಸಾರ ಕ್ರಮವಹಿಸುವುದು.

h. ಭೂಮಾಪನ ಶಾಖೆಯಲ್ಲಿ ಆಕಾರಬಂದ್, ಕೆ.ಡಿ.ಟಿ, ಪಕ್ಕಾ ಟಿಪ್ಪಣಿ ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ ಹಾಗೂ ತಹಶೀಲ್ದಾರ್ ಕಛೇರಿಯಲ್ಲಿ ಮಂಜೂರಿ ಕಡತವು ಲಭ್ಯವಿಲ್ಲದಿದ್ದಲ್ಲಿ, ಪಟ್ಟಿ ತಯಾರಿಸಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಗೈರುವಿಲೇ ಕಡತಗಳ ಪುನರ್ ನಿರ್ಮಾಣ ಸಮಿತಿ ಸಭೆಯಲ್ಲಿ ಮಂಡಿಸಿ ತೀರ್ಮಾನಿಸಿ ಸರ್ಕಾರದಿಂದ ಅನುಮೋದನೆ ಪಡೆದು, ನಂತರ ನಿಯಮಾನುಸಾರ ಕ್ರಮವಹಿಸುವುದು.

i. ಮಂಜೂರಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ರವರ ಕಛೇರಿಯಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳಲ್ಲಿ ಅಂತಿಮ ಆದೇಶ/ವರದಿ ಬಂದ ನಂತರ ನಿಯಮಾನುಸಾರ ಕ್ರಮ ವಹಿಸುವುದು.

j. ಯಾವುದೇ ನಕಲಿ ದಾಖಲೆ, ಸೇರ್ಪಡೆ ಮಾಡಿದ ದಾಖಲೆಗಳು, ತಿದ್ದಿದ ದಾಖಲೆಗಳು ಕಂಡು ಬಂದಲ್ಲಿ ಕಡ್ಡಾಯವಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ವರದಿ ಪಡೆಯುವುದು ಹಾಗೂ ಅಕ್ರಮ ಕಂಡು ಬಂದಲ್ಲಿ ಅಂತಹ ಮಂಜೂರಾತಿಯನ್ನು ರದ್ದುಪಡಿಸಲು ನಿಯಮಾನುಸಾರ ಕ್ರಮವಹಿಸುವುದು.

k. ಸುತ್ತೋಲೆ ಸಂಖ್ಯೆ : ಆರ್.ಡಿ 74 ಎಲ್.ಜಿ.ಪಿ 2009 ದಿನಾಂಕ: 17-09-2009 ರ ಸುತ್ತೋಲೆಯ ಕಂಡಿಕೆ 12(f) ರಲ್ಲಿ ಮಂಜೂರಿ ಮಾಡಿರುವ ವಿಸ್ತೀರ್ಣಕ್ಕಿಂತ ಹೆಚ್ಚುವರಿಯಾಗಿ ಪೋಡಿ ದುರಸ್ತಿ ಮಾಡಿರುವುದು ಕ್ರಮಬದ್ಧವಲ್ಲವೆಂದು ಇರುತ್ತದೆ. ಈ ರೀತಿಯ ಕೆಲವು ಪ್ರಕರಣಗಳ ಸ.ನಂ ಗಳಲ್ಲಿ **ಉದಾ:-** ಖರಾಬು ವಿಸ್ತೀರ್ಣವನ್ನು ಮಂಜೂರಿಯಾಗಿರುವ ವಿಸ್ತೀರ್ಣದಲ್ಲಿ ಕಳೆದು ಪೋಡಿ ದುರಸ್ತಿ ಮಾಡದೆ, ಮಂಜೂರಿ ವಿಸ್ತೀರ್ಣದ ಜೊತೆ ಖರಾಬು ವಿಸ್ತೀರ್ಣವನ್ನು ಸೇರಿಸಿ ಪೋಡಿ ದುರಸ್ತಿ ಮಾಡಿರುವುದು ಕಂಡು ಬಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಖರಾಬು ಸೇರಿ ಮಂಜೂರಿ ವಿಸ್ತೀರ್ಣಕ್ಕೆ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿಕೊಳ್ಳುವ ಕುರಿತು, ಸರ್ಕಾರದಿಂದ ಸೂಕ್ತ ನಿರ್ದೇಶನ ಪಡೆದು ನಂತರ ಕ್ರಮ ಕೈಗೊಳ್ಳುವುದು.

l. ಸದರಿ ಆದೇಶವು ಬೆಂಗಳೂರು ನಗರ ಜಿಲ್ಲೆಯ ಜಾಲ ಹೋಬಳಿಯ 18 ಗ್ರಾಮಗಳು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ 12 ಗ್ರಾಮಗಳಲ್ಲಿ ನಶಿಸಿ ಹೋಗಿರುವ ದಾಖಲೆಗಳ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮಾತ್ರ ಸೀಮಿತವಾಗಿರುತ್ತದೆ.

ಈ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸದರಿ ಕಾರ್ಯದಲ್ಲಿ ಯಾವುದೇ ನಕಲಿ ದಾಖಲೆಗಳು ಸೇರ್ಪಡೆಯಾಗದಂತೆ, ಯಾವುದೇ ದಾಖಲೆಗಳನ್ನು ಸೃಷ್ಟಿಸದಂತೆ /ತಿದ್ದದಂತೆ ನಿಗಾವಹಿಸುವುದು ಮತ್ತು ಯಾವುದೇ ದೂರುಗಳಿಗೆ ಆಸ್ಪದ ನೀಡದಂತೆ ಸಂಪೂರ್ಣ ಪಾರದರ್ಶಕತೆಯನ್ನು ಪಾಲಿಸತಕ್ಕದ್ದು ಹಾಗೂ ಯಾವುದೇ ವಿಳಂಬಕ್ಕೆ ಅವಕಾಶ ನೀಡದೇ ಸದರಿ ಕಾರ್ಯವನ್ನು ಮೂರು (03) ತಿಂಗಳೊಳಗಾಗಿ ಪೂರ್ಣಗೊಳಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(**ಮಹಾಂತಯ್ಯ ಎಸ್ ಹೊಸಮಠ**)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

PR-233

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯಕ್ಕೆ 2026-27ನೇ ಸಾಲಿನ ಆಯವ್ಯಯದಲ್ಲಿ ವೇತನ ಮತ್ತು ವೇತನೇತರ ವೆಚ್ಚಗಳಿಗಾಗಿ ಹಂಚಿಕೆ ಮಾಡಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. 2026-27ನೇ ಸಾಲಿನ ಆಯವ್ಯಯ ಹಂಚಿಕೆ.

2. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಇಎಪಿ/ಅನುದಾನ/05/2026-27/71,ದಿನಾಂಕ:15.04.2026

20 ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಟಿಎಫ್‌ಪಿ 2026, ದಿನಾಂಕ:02.04.2026

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆಯವ್ಯಯದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯದ ಆಡಳಿತ ನಿರ್ವಹಣೆ ಮತ್ತು ಅಧಿಕಾರಿ-ಸಿಬ್ಬಂದಿಗಳ ವೇತನ ಹಾಗೂ ವೇತನೇತರ ವೆಚ್ಚಗಳಿಗಾಗಿ 2026-27ನೇ ಸಾಲಿನ ಲೆಕ್ಕಶೀರ್ಷಿಕೆ:2852-08-201-0-01ರ ಉಪ ಲೆಕ್ಕಶೀರ್ಷಿಕೆಗಳಡಿಯಲ್ಲಿ ಒಟ್ಟಾರೆ ರೂ.318.45 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ವೇತನ ಮತ್ತು ವೇತನೇತರ ಲೆಕ್ಕಶೀರ್ಷಿಕೆಗಳಡಿ ಹಂಚಿಕೆ ಮಾಡಲಾದ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಸಲ್ಲಿಸಿ, ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಮತ್ತು ಅನುದಾನವನ್ನು ಬಿಡುಗಡೆಗೊಳಿಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ 2026-27ನೇ ಸಾಲಿನ ಆಯವ್ಯಯದಲ್ಲಿ ವೇತನ ಮತ್ತು ವೇತನೇತರ ಲೆಕ್ಕಶೀರ್ಷಿಕೆಗಳಡಿ ಹಂಚಿಕೆ ಮಾಡಲಾದ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2026-27ನೇ ಸಾಲಿನ ಆಯವ್ಯಯ ಹಂಚಿಕೆಯಂತೆ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ವೇತನ ಮತ್ತು ವೇತನೇತರ ವೆಚ್ಚಗಳಿಗಾಗಿ ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 84 ಸಿಓಎಫ್ 2026

ಬೆಂಗಳೂರು, ದಿನಾಂಕ: 2ನೇ ಮೇ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2026-27ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ:2852-08-201-0-01ರ ಉಪ ಲೆಕ್ಕಶೀರ್ಷಿಕೆಗಳಡಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯಕ್ಕೆ ವೇತನ ಮತ್ತು ವೇತನೇತರ ವೆಚ್ಚಗಳಿಗೆ ಹಂಚಿಕೆ ಮಾಡಿರುವ ಒಟ್ಟು **ರೂ.316.95 ಲಕ್ಷಗಳ ಅನುದಾನವನ್ನು** ಈ ಕೆಳಕಂಡ ಕೋಷ್ಠಕದಂತೆ ಬಿಡುಗಡೆಗೊಳಿಸಿ, ಖಜಾನೆ-2 ರಿಂದ ಸೆಳೆದು ವೆಚ್ಚ ಮಾಡಲು ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

ಕ್ರಸಂ	ಯೋಜನೆ / ಲೆಕ್ಕ ಶೀರ್ಷಿಕೆ	ಉಪ ಲೆಕ್ಕ ಶೀರ್ಷಿಕೆ	2026-27ನೇ ಸಾಲಿಗೆ ಆಯವ್ಯಯದಲ್ಲಿ ಕಲ್ಪಿಸಿರುವ ಅನುದಾನ	ಬಿಡುಗಡೆ ಮಾಡಲಾದ ಅನುದಾನ
1	2852-08-201-0-01	ವೇತನ-ಅಧಿಕಾರಿಗಳು-002	102.00	102.00
2		ತುಟ್ಟಿ ಭತ್ಯೆ-011	32.00	32.00
3		ಇತರೆ ಭತ್ಯೆ-014	24.00	24.00
ಒಟ್ಟು (ಅ)			**158.00**	**158.00**
4	2852-08-201-0-01	**ವೈದ್ಯಕೀಯ ವೆಚ್ಚ ಮರುಪಾವತಿ -021**	**3.00**	**1.50**
5		ಗುತ್ತಿಗೆ/ಹೊರಗುತ್ತಿಗೆ -034	21.40	21.40
6		ಪ್ರಯಾಣ ವೆಚ್ಚ -041	4.00	4.00
7		ಕಛೇರಿ ವೆಚ್ಚಗಳು-50	20.00	20.00
8		ಕಟ್ಟಡ ವೆಚ್ಚಗಳು-071	105.00	105.00
9		ಸಾರಿಗೆ ವೆಚ್ಚ-195	7.05	7.05
ಒಟ್ಟು (ಆ)			**160.45**	**158.95**
ಒಟ್ಟು (ಅ)+(ಆ)			**318.45**	**316.95**

1. ಉದ್ದೇಶಿತ ಲೆಕ್ಕಶೀರ್ಷಿಕೆ 021- ವೈದ್ಯಕೀಯ ವೆಚ್ಚದ ಮರುಪಾವತಿ ಅಡಿ ಹಂಚಿಕೆಯಾಗಿರುವ ಅನುದಾನವನ್ನು Group DDO ಗಳಿಗೆ ಸಮಾನವಾಗಿ ಬಿಡುಗಡೆ ಮಾಡದೇ, ಅಧೀನ ಕಚೇರಿ (DDO) ಗಳ ಅವಶ್ಯಕತೆಯನುಸಾರ ಬಿಡುಗಡೆ ಮಾಡಲು ಕ್ರಮವಹಿಸುವುದು.
2. ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ರ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
3. ಇಲಾಖೆಗೆ ಹಂಚಿಕೆಯಾಗಿರುವ ಅನುದಾನಕ್ಕೆ ಸಂಬಂಧಿಸಿದಂತೆ ಅವಲೋಕನ ತಂತ್ರಾಂಶದಲ್ಲಿ ಕಡ್ಡಾಯವಾಗಿ ಗುರಿಯನ್ನು ನಿಗದಿಪಡಿಸುವುದು.
4. 2026-27ನೇ ಸಾಲಿನ ಲೆಕ್ಕಶೀರ್ಷಿಕೆ:2852-08-201-0-01ರ ಉಪ ಲೆಕ್ಕಶೀರ್ಷಿಕೆಗಳಡಿ ಬಿಡುಗಡೆ ಮಾಡಲಾದ ಅನುದಾನವನ್ನು ವೆಚ್ಚ ಮಾಡಿರುವ ಕುರಿತು ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
5. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 02 ಟಿಎಫ್‌ಪಿ 2026, ದಿನಾಂಕ:02.04.2026ರಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಸಿಐ 39 ಐ.ಎಫ್.1 2026, ದಿನಾಂಕ: 24-04-2026ರಲ್ಲಿ ನೀಡಿರುವ ಸಹಮತಿ ಮೇರೆಗೆ ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2026, ದಿನಾಂಕ:02.04.2026 ರಲ್ಲಿ ಸರ್ಕಾರದ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-234

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿ ಮೈಸೂರು ಷುಗರ್ ಕಂಪನಿಯ ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಗಾಗಿ ರೂ.60.00 ಕೋಟಿಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. 2024-25ನೇ ಸಾಲಿನ ಆಯವ್ಯಯ ಘೋಷಣಾ ಖಂಡಿಕೆ:327
2. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 27 (ಟಿ) ವೆಚ್ಚ-1/2024, ದಿನಾಂಕ:15.04.2024
3. ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರ ಪತ್ರ ಸಂಖ್ಯೆ: MD/MSCo/DPR/30/2024-25, ದಿನಾಂಕ:09.08.2024.
4. ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರ ಪತ್ರ ಸಂಖ್ಯೆ:MD/MSCo/DPR/58/2024-25, ದಿನಾಂಕ:05.10.2024.
5. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ದಿನಾಂಕ:20.11.2024ರ ಸಭಾ ನಿರ್ಣಯ.
6. ಅಧ್ಯಕ್ಷರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರ ಪತ್ರ ದಿನಾಂಕ:14.10.2025.
7. ದಿನಾಂಕ:12.03.2026ರಂದು ಜರುಗಿದ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿರುವ ಕ್ರಮ ಸಂಖ್ಯೆ (3) ರಲ್ಲಿನ ನಿರ್ಣಯ
8. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 493 ವೆಚ್ಚ-1/2024, ದಿನಾಂಕ:06.06.2026

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ 2024-25ನೇ ಸಾಲಿನ ಆಯವ್ಯಯ ಘೋಷಣಾ ಖಂಡಿಕೆ:327 ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿರುತ್ತದೆ.

"ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ನಿರ್ಮಿಸಲಾಗುವುದು. ಸರ್ಕಾರದ ಅನುದಾನ, ಇತರೆ ಮೂಲಗಳು ಹಾಗೂ ಕಾರ್ಖಾನೆಯ Asset Monetization ಮೂಲಕ ಸಂಪನ್ಮೂಲವನ್ನು ಕ್ರೋಢೀಕರಿಸುವುದು".

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಅನಧಿಕೃತ ಟಿಪ್ಪಣಿಯ ಅನುಬಂಧ-1ರಲ್ಲಿ ಆಯವ್ಯಯ ಘೋಷಣಾ ಖಂಡಿಕೆ-327ರ ಅನುಷ್ಠಾನದ ಕುರಿತು "ಕಾರ್ಖಾನೆಯ Asset Monetization ಮತ್ತು ಇತರೆ ಮೂಲಗಳಿಂದ ಅನುಷ್ಠಾನಗೊಳಿಸುವುದು" ಎಂದು ಆರ್ಥಿಕ ಇಲಾಖೆಯು ಸಲಹೆಯನ್ನು ನೀಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ, ರೂ.319.52 ಕೋಟಿಗಳ ವೆಚ್ಚದಲ್ಲಿ 10,000 ಟಿ.ಸಿ.ಡಿ ಸಾಮರ್ಥ್ಯದ ಕಬ್ಬು ನುರಿಸುವ ಘಟಕವನ್ನು ಮತ್ತು ರೂ.221.29 ಕೋಟಿಗಳ ಸಹ-ವಿದ್ಯುತ್ ಘಟಕವನ್ನು ಸ್ಥಾಪಿಸುವ ಕುರಿತು ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ಸಿದ್ಧಪಡಿಸಿರುವ ವಿಸ್ಕೃತ ಯೋಜನಾ ವರದಿಯನ್ನು ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರು ಸರ್ಕಾರಕ್ಕೆ ಸಲ್ಲಿಸಿದ್ದರು. ದಿನಾಂಕ:20.08.2024 ರಂದು ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಪರಿಶೀಲನಾ ಸಭೆಯಲ್ಲಿ ಕಬ್ಬಿನ ಲಭ್ಯತೆಯನ್ನು ಆಧರಿಸಿ ಪರಿಷ್ಕೃತ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ಸಿದ್ಧಪಡಿಸಿರುವ ಪರಿಷ್ಕೃತ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ.

1. **Part- A:-** Mill & Boiling House Stabilization Cum Modernization of Existing 5000 TCD Sugar Plant . ಇದರ ಅನುಷ್ಠಾನ ವೆಚ್ಚ 59.80 ಕೋಟಿಗಳು ಆಗಿರುತ್ತದೆ.

2. **Part- B:-** New 5000 TCD Sugar Plant With 100 TPH Boiler (Excluding TG SET). ಇದರ ಅನುಷ್ಠಾನ ವೆಚ್ಚ 288.49 ಕೋಟಿಗಳು ಆಗಿರುತ್ತದೆ.

3. **Part- C:-** 80 KLPD Ethanol Plant With Slops Fired Boiler on **C** Molasses Feedstock. ಇದರ ಅನುಷ್ಠಾನ ವೆಚ್ಚ 116.00 ಕೋಟಿಗಳು ಆಗಿರುತ್ತದೆ

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ, ಪರಿಷ್ಕೃತ ವಿಸ್ತೃತ ಯೋಜನಾ ವರದಿಯ ಕುರಿತು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:20.11.2024ರಂದು ಜರುಗಿದ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.

1. ಪರಿಷ್ಕೃತ ವಿಸ್ತೃತ ಯೋಜನಾ ವರದಿಯಲ್ಲಿನ Part – A ಮತ್ತು Part-C ಗಳನ್ನು ಮಾತ್ರ ಪ್ರಸ್ತುತ ಸಾಲಿನಲ್ಲಿ ಅನುಷ್ಠಾನಗೊಳಿಸುವ ಸಂಬಂಧ, ಎಲೆಕ್ಟ್ರಿಕಲ್ ಮೋಟಾರ್ ಹೆಚ್.ಪಿ. ಅಪ್‌ಗ್ರೇಡ್ ಮಾಡುವ ಪ್ರಕ್ರಿಯೆ ಹೊರತುಪಡಿಸಿ 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಯ ಒಟ್ಟಾರೆ ಅಂದಾಜು ವೆಚ್ಚ ರೂ.59.80 ಕೋಟಿಗಳು ಮತ್ತು 80 ಕೆ.ಎಲ್.ಪಿ.ಡಿ ಎಥೆನಾಲ್ ಘಟಕದ ಸ್ಥಾಪನೆಯ ಒಟ್ಟಾರೆ ಅಂದಾಜು ವೆಚ್ಚ ರೂ.116.00 ಕೋಟಿಗಳನ್ನು ಸೇರಿ ಒಟ್ಟು ರೂ.175.80 ಕೋಟಿಗಳ ಪ್ರಸ್ತಾವನೆಯನ್ನು ಒಪ್ಪಲು ಮತ್ತು ಇದರಲ್ಲಿ ರೂ.100.00 ಕೋಟಿಗಳ ಸಹಾಯಾನುದಾನವನ್ನು ರಾಜ್ಯ ಸರ್ಕಾರದಿಂದ ಒದಗಿಸಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ / ಸಚಿವ ಸಂಪುಟ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.
2. OMC / ರಾಷ್ಟ್ರೀಕೃತ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲ/ನೆರವು ಪಡೆದು ಉಳಿದ ರೂ.75.80 ಕೋಟಿಗಳ ಸಂಪನ್ಮೂಲವನ್ನು ಕ್ರೋಢೀಕರಿಸಲು ತೀರ್ಮಾನಿಸಲಾಯಿತು.

3. ಉಳಿದಂತೆ, ಕಬ್ಬಿನ ಲಭ್ಯತೆಯನ್ನು ಆಧರಿಸಿ, ಹೊಸ ಬಾಯ್ಲರ್ ಘಟಕದ ಸ್ಥಾಪನೆಯ ಪ್ರಸ್ತಾವನೆಯನ್ನು ಮುಂದಿನ ದಿನಗಳಲ್ಲಿ ಪರಿಗಣಿಸುವ ಕುರಿತಂತೆ ಚರ್ಚಿಸಿ, ಪ್ರಸ್ತುತ ವಿಸ್ತೃತ ಯೋಜನಾ ವರದಿಯ Part-B ರಲ್ಲಿನ ಶಿಫಾರಸ್ಸನ್ನು ಮುಂದೂಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ಪತ್ರದಲ್ಲಿ ಅಧ್ಯಕ್ಷರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರ ದಿನಾಂಕ:14.10.2025ರ ಪತ್ರದಲ್ಲಿ, ದಿ ಮೈಸೂರು ಷುಗರ್ ಕಂಪನಿಯ ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ರೂ.60.00 ಕೋಟಿಗಳನ್ನು ಸರ್ಕಾರದಿಂದ ಬಿಡುಗಡೆಗೊಳಿಸಲು ಕೋರಿರುತ್ತಾರೆ.

ದಿ ಮೈಸೂರು ಷುಗರ್ ಕಂಪನಿಯ ಪುನಶ್ಚೇತನದ ದೃಷ್ಟಿಯಿಂದ ಬಾಯ್ಲಿಂಗ್ ಹೌಸ್ ದುರಸ್ತಿ ಮಾಡುವುದು ಮತ್ತು ಕಬ್ಬು ನುರಿಸುವ ಘಟಕದ ಯಂತ್ರೋಪಕರಣಗಳ ಆಧುನೀಕರಣ ಅವಶ್ಯಕವಾಗಿರುವ ಹಿನ್ನೆಲೆಯಲ್ಲಿ, ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ನಿರ್ಮಿಸುವ ಪ್ರಸ್ತಾವನೆಯನ್ನು ಕೈಬಿಟ್ಟು, ದಿ ಮೈಸೂರು ಷುಗರ್ ಕಾರ್ಖಾನೆಯ ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಗಾಗಿ ರೂ.60.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಸಚಿವ ಸಂಪುಟ ಸಭೆಗೆ ಮಂಡಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (7) ರ ನಿರ್ಣಯದಲ್ಲಿ ದಿ ಮೈಸೂರು ಷುಗರ್ ಕಂಪನಿಯ ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಗಾಗಿ ರೂ.60.00 ಕೋಟಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಗೆ ಸಚಿವ ಸಂಪುಟ ಸಭೆಯು ಅನುಮೋದನೆಯನ್ನು ನೀಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಟಿಪ್ಪಣಿಯಲ್ಲಿ, ದಿ ಮೈಸೂರು ಷುಗರ್ ಕಾರ್ಖಾನೆಯ ಬಾಯಿಂಗ್ ಹೌಸ್ ದುರಸ್ತಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಸಲು ರೂ.60.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು 2026-27ನೇ ಸಾಲಿನ ಪೂರಕ ಅಂದಾಜು-1ನೇ ಕಂತಿನಲ್ಲಿ ಅನುದಾನ ಒದಗಿಸಲು ಪರಿಗಣಿಸಲಾಗುವುದು ಎಂದು ಆರ್ಥಿಕ ಇಲಾಖೆಯು ತಿಳಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ದಿ ಮೈಸೂರು ಷುಗರ್ ಕಂಪನಿಯ ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಗಾಗಿ ರೂ.60.00 ಕೋಟಿಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ, ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಸಿಐ 87 ಸಿಓಎಫ್ 2024</u>
<u>ಬೆಂಗಳೂರು, ದಿನಾಂಕ: 7ನೇ ಜುಲೈ 2026</u>

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿ ಮೈಸೂರು ಷುಗರ್ ಕಂಪನಿಯ ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಗಾಗಿ ರೂ.60.00 ಕೋಟಿಗಳ ಯೋಜನೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಆದೇಶಿಸಿದೆ.

1. 2026-27ನೇ ಸಾಲಿನ ಪೂರಕ ಅಂದಾಜು-1ನೇ ಕಂತಿನಲ್ಲಿ ಆರ್ಥಿಕ ಇಲಾಖೆಯು ಅನುದಾನ ಒದಗಿಸಿದ ನಂತರ ನಿಯಮಾನುಸಾರ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

2. ಪ್ರಸ್ತುತ ದಿ ಮೈಸೂರು ಷುಗರ್ ಕಂಪನಿಗೆ ಸರ್ಕಾರದಿಂದ ಒದಗಿಸುತ್ತಿರುವ ಈ ಅನುದಾನವು ಅಂತಿಮ ಬಾರಿಯಾಗಿರುತ್ತದೆ.

3. ದಿ ಮೈಸೂರು ಷುಗರ್ ಕಂಪನಿಯ ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಯ ಕುರಿತಂತೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ಹಾಗೂ ಸದರಿ ಅಧಿನಿಯಮ ಮತ್ತು ನಿಯಮಗಳಿಗೆ ಕಾಲಕಾಲಕ್ಕೆ ಸರ್ಕಾರವು ಮಾಡಿರುವ ತಿದ್ದುಪಡಿ/ಸುತ್ತೋಲೆಗಳನುಸಾರ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು.

4. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರನ್ವಯ ಟೆಂಡರ್ ಪ್ರಕ್ರಿಯೆಯನ್ನು ಹೆಚ್ಚು ಪ್ರಚಾರದಲ್ಲಿರುವ ಎರಡು ದಿನಪತ್ರಿಕೆ (ಕನ್ನಡ ಮತ್ತು ಆಂಗ್ಲಭಾಷೆ) ಗಳಲ್ಲಿ ಪ್ರಕಟಣೆ ನೀಡತಕ್ಕದ್ದು.

5. ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವ ಈ ಕಾಮಗಾರಿಯ\ಯೋಜನೆಯ ಅನುಷ್ಠಾನದ ಕುರಿತು ದಿ ಮೈಸೂರು ಷುಗರ್ ಕಂಪನಿಯು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು.

6. ಆಡಳಿತಾತ್ಮಕ ಅನುಮೋದನೆ ನೀಡಿದ ಈ ಪ್ರಸ್ತಾಪಿತ ಕಾಮಗಾರಿ/ ಯೋಜನೆಗೆ ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಪರಿಶೀಲನೆ/ ತಾಂತ್ರಿಕ ಅನುಮೋದನೆ ಪಡೆದ ನಂತರವೇ ದಿ ಮೈಸೂರು ಷುಗರ್ ಕಂಪನಿಯ ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ / ನಿಯಮಗಳನುಸಾರ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು.

7. ಬಾಯ್ಲಿಂಗ್ ಹೌಸ್ ದುರಸ್ತಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಯ ಕಾಮಗಾರಿಗೆ ನಿಗದಿಪಡಿಸಿದ ಸ್ಥಳ ಮತ್ತು ಸ್ವರೂಪವನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡತಕ್ಕದ್ದಲ್ಲ.

8. ಬಾಯ್ಲಿಂಗ್ ಹೌಸ್ ದುರಸ್ತಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಯನ್ನು ಮಾಡುವಾಗ ಈಗಾಗಲೇ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು / ನಿಗಮ / ಮಂಡಳಿಗಳು ಕಪ್ಪುಪಟ್ಟಿಗೆ ಸೇರಿಸಿದ ಕಂಪನಿ / ಕಾರ್ಖಾನೆಗಳಿಂದ ಯಂತ್ರೋಪಕಣಗಳನ್ನು ಖರೀದಿಸದೇ ಇರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

9. ಬಾಯ್ಲಿಂಗ್ ಹೌಸ್ ದುರಸ್ತಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಯನ್ನು ಮಾಡುವಾಗ ಈಗಾಗಲೇ ಉಪಯೋಗಿಸಿದ/ ಬಳಕೆ ಮಾಡಿದ ಯಂತ್ರೋಪಕರಣಗಳನ್ನು /ಬಿಡಿ ಭಾಗಗಳನ್ನು ಅಳವಡಿಸದಂತೆ ಖಾತ್ರಿಪಡಿಸಕೊಳ್ಳತಕ್ಕದ್ದು ಹಾಗೂ ಯಂತ್ರೋಪಕರಣಗಳನ್ನು ಅಧಿಕೃತ ಉತ್ಪಾದಕರು /ಮಾರಾಟಗಾರರಿಂದ ಖರೀದಿಸುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

10. ಬಾಯ್ಲಿಂಗ್ ಹೌಸ್ ದುರಸ್ತಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಸುವ ಕಾಮಗಾರಿಗೆ ಯಂತ್ರೋಪಕರಣಗಳನ್ನು ಪೂರೈಸುವ / ಅಳವಡಿಸುವ ಗುತ್ತಿಗೆದಾರರು / ಪೂರೈಕೆದಾರರು ಅಂತಹ ಯಂತ್ರೋಪರಣಗಳಿಗೆ ಗರಿಷ್ಟ ಅವಧಿಗೆ ವಾರಂಟಿಯನ್ನು ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ನೀಡುವುದನ್ನು ಖಚಿತಪಡಿಕೊಳ್ಳತಕ್ಕದ್ದು.

11. ಬಾಯ್ಲಿಂಗ್ ಹೌಸ್ ದುರಸ್ತಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಸುವ ಕಾಮಗಾರಿಗೆ ನಿಗದಿಪಡಿಸಿದ ಸ್ಥಳದ ಮಣ್ಣಿನ ಮತ್ತು ಜಾಗದ ಕುರಿತು ಕಾರ್ಯಸಾಧ್ಯತಾ ವರದಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

12. ಈ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ ಕಾಮಗಾರಿಗಳ /ಯೋಜನೆಯಲ್ಲಿನ ಕೆಲಸಗಳು ಈಗಾಗಲೇ ಕಂಪನಿಯು ಕೈಗೊಂಡ ಕಾಮಗಾರಿ/ಯೋಜನೆಗಳಲ್ಲಿ ಹಾಗೂ ಮುಂದೆ ಕೈಗೊಳ್ಳಬಹುದಾದ ಕಾಮಗಾರಿ/ಯೋಜನೆಗಳಲ್ಲಿ ಪುನರಾವರ್ತನೆಯಾಗದಂತೆ ಖಾತರಿಪಡಿಸಿಕೊಳ್ಳತಕ್ಕದ್ದು.

13. ಈ ಕಾಮಗಾರಿಯನ್ನು /ಯೋಜನೆಯನ್ನು ಪ್ರಾರಂಭಿಸುವ ಪೂರ್ವದಲ್ಲಿ ಕಾಮಗಾರಿಯ ಪೂರ್ವದ ಹಂತ ಪ್ರಾರಂಭದ ಹಂತ, ಪ್ರಗತಿ ಹಂತ ಮತ್ತು ಮುಕ್ತಾಯದ ಹಂತ ಹೀಗೆ ಒಟ್ಟಾರೆ ನಾಲ್ಕು ಹಂತಗಳ ವಿವಿಧ ಸನ್ನಿವೇಶಗಳ ಛಾಯಾಚಿತ್ರ, ವಿಡಿಯೋ ದೃಶ್ಯಾವಳಿಗಳನ್ನು ಕಡ್ಡಾಯವಾಗಿ ಚಿತ್ರಿಸತಕ್ಕದ್ದು ಹಾಗೂ ಮೂರನೇ ಪಕ್ಷಕಾರರಿಂದ ಕಾಮಗಾರಿಯ ಹಂತಗಳನ್ನು ಪರಿಶೀಲಿಸಿಕೊಂಡು ವರದಿಯನ್ನು ಪಡೆದುಕೊಳ್ಳತಕ್ಕದ್ದು.

14. ಸದರಿ ಕಾಮಗಾರಿಯ ಬಿಲ್ ಮೊತ್ತವನ್ನು ಪಾವತಿಸುವಾಗ ಕಡ್ಡಾಯವಾಗಿ ಮೂರನೇ ಪಕ್ಷಕಾರರಿಂದ ಹಂತ ಹಂತವಾಗಿ ಪರಿಶೀಲನೆ ಮಾಡಿದ ವರದಿಗಳನ್ನು ತಪಾಸಣೆಗೆ ಒಳಪಡಿಸಿ ಕಾಮಗಾರಿಗಳ /ಯಂತ್ರೋಪಕರಣಗಳ ಗುಣಮಟ್ಟವನ್ನು ಖಾತರಿಪಡಿಸಿಕೊಂಡ ನಂತರವೇ ಬಿಲ್ ಮೊತ್ತವನ್ನು ಪಾವತಿಸತಕ್ಕದ್ದು.

15. ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಸುವ ಕಾಮಗಾರಿಯು ಪೂರ್ಣಗೊಂಡ ನಂತರ ಸದರಿ ಯಂತ್ರೋಪಕರಣಗಳ ಅಳವಡಿಕೆಯನ್ನು ಖಾತರಿಪಡಿಸಿಕೊಂಡು ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸಿಕೊಳ್ಳತಕ್ಕದ್ದು.

16. ಬಾಯ್ಲಿಂಗ್ ಹೌಸ್ ದುರಸ್ತಿಗಾಗಿ ಮತ್ತು 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಸುವ ಕಾಮಗಾರಿಯ /ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಯ ಸಂಪೂರ್ಣ ಜವಾಬ್ದಾರಿಯು ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರಿಗೆ ವಹಿಸಲಾಗಿದೆ. ಈ ಕಾಮಗಾರಿಯ /ಯೋಜನೆಯ ಅನುಷ್ಠಾನದ ಗುಣ ಮಟ್ಟದಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಲ್ಲಿ ಅಥವಾ ಅನುದಾನ ದುರುಪಯೋಗವಾದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರು ಜವಾಬ್ದಾರಿಯಾಗಿರುತ್ತಾರೆ.

ಈ ಆದೇಶವನ್ನು ದಿನಾಂಕ:12.03.2026ರಂದು ಜರುಗಿದ ಸಚಿವ ಸಂಪುಟ ಸಭೆಯು ಕಾರ್ಯಸೂಚಿಯಲ್ಲಿರುವ ಕ್ರಮ ಸಂಖ್ಯೆ (3) ರಲ್ಲಿ ನೀಡಿದ ಅನುಮೋದನೆ ಮೇರೆಗೆ ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 493 ವೆಚ್ಚ-1/2024, ದಿನಾಂಕ:06.06.2026ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-235

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 103 ಮುಅಬಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:04.07.2026

ಸುತ್ತೋಲೆ

ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 103 ಮುಅಬಿ 2020, ದಿನಾಂಕ:28.05.2025 ರಲ್ಲಿ ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳು, ಪೂಜಾ ಸ್ಥಳಗಳ ದುರಸ್ತಿ/ಜೀರ್ಣೋದ್ಧಾರ ಹಾಗೂ ನವ ನಿರ್ಮಾಣ ಉದ್ದೇಶಕ್ಕಾಗಿ, ಧಾರ್ಮಿಕ ದತ್ತಿ ಇಲಾಖಾ ನಿಯಂತ್ರಣಕ್ಕೆ ಬರುವ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಖಾಸಗಿ ದೇವಸ್ಥಾನಗಳಿಗೆ/ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹಾಗೂ ಮಠಗಳಿಗೆ ಸಂಬಂಧಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡಲು ಅನುಸರಿಸಬೇಕಾದ ಕ್ರಮಗಳನ್ನು ನಿಗಧಿಪಡಿಸಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಸದರಿ ಸುತ್ತೋಲೆಯಲ್ಲಿನ "**I. ಧಾಮಿ ಕ ದತ್ತಿ ಇಲಾಖಾ ನಿಯಂತ್ರಣಕ್ಕೆ ಬರುವ ಸಂಸ್ಥೆಗಳಿಗೆ ಸಂಬಂಧಿಸಿದಂತೆ**" ಎಂಬ ಶೀರ್ಷಿಕೆಯಡಿ ಕಂಡಿಕೆ (ಎ) ರ ನಂತರ ಈ ಕೆಳಕಂಡಂತೆ ಸೇರ್ಪಡೆ ಮಾಡಲಾಗಿದೆ.

> **"(ಎಎ) ಲೆಕ್ಕ ಶೀರ್ಷಿಕೆ 4059-80-051-0-52-Infrastructure & Stay Religious Places-Facilities at Religious Places-386-Purchase/Construction of Buildings ರಡಿ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಾಗಿ (CMIDP) ಅನುದಾನ ಒದಗಿಸಿದಲ್ಲಿ, ಸದರಿ ಅನುದಾನವನ್ನು CMIDP ಯೋಜನೆಯಡಿ ನಿರ್ದಿಷ್ಟಪಡಿಸಲಾಗುವ ಕಾಮಗಾರಿಗಳಿಗೆ ಮಾತ್ರ ಬಿಡುಗಡೆ ಮಾಡತಕ್ಕದ್ದು."**

ಇದನ್ನು ಹೊರತುಪಡಿಸಿ, ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 103 ಮುಅಬಿ 2020, ದಿನಾಂಕ:28.05.2025 ರಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

(ರಾಜೇಂದರ್ ಕುಮಾರ್ ಕಟಾರಿಯಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಕಂದಾಯ ಇಲಾಖೆ

PR-236

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

MADESHWARA NARASIMHA MURTHY JAYASIMHA